Reg No M. 1229 Sd 1—3—1956

೩೯ನೇ ವರ್ಷ - 39 th Year

ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರು

ಎಸ್ಸೆಸ್ಸೆಲ್ಸಿ ಸಪ್ಲಿಮೆಂಟರಿ

ಬೆಂಗಳೂರು 29 — ಎಸ್ಸೆಸ್ಸೆಲ್ಸಿ ಸಪ್ಲಿಮೆಂಟರಿ ಪರೀಕ್ಷೆ ಜೂನ್ ತಿಂಗಳಿನಲ್ಲಿ ನಡೆಯುವುದು.

ಲಾಠಿಪ್ರಹಾರ

ಕಲ್ಕತ್ತಾ 28 — ಇಂದಿಲ್ಲಿ ಬಂಗಾಳ-ಬಿಹಾರ ವಿಲೀನ ಪರ ವಿರೋಧಿಗಳಲ್ಲಿ ಕಾದಾಟ ಆಗಿ ಪೋಲೀಸರು ಲಾಠಿ ಪ್ರಹಾರ ಮಾಡಿದರು ಗಾಯಗೊಂಡ ಮೂವರು ಆಸ್ಪತ್ರೆಯಲ್ಲಿದ್ದಾರೆ

ಅಂದಾಜಪಟ್ಟಿ ಮಂಡನೆ

ಬೆಂಗಳೂರು 29 — ಮಾರ್ಚ್ 12 ನೇ ತಾ|| ಮೈಸೂರು ಲೆ|| ಅಸೆಂಬ್ಲಿಯಲ್ಲಿ ಅಂದಾಜಪಟ್ಟಿ ಮಂಡಿಸಲ್ಪಡುವದು

ಆಶ್ವಾಸನೆ

ಪ್ಯಾರಿಸ್ 28 — ಆಯುಧಗಳನ್ನು ನೀವು ಕೆಳಗಿಡಿ. ಮೂರು ತಿಂಗಳುಗಳಲ್ಲಿ ಸ್ವತಂತ್ರ ಚುನಾವಣೆಗಳನ್ನು ನಾವು ನಡೆಸುತ್ತೇವೆ ಎಂದು ಫ್ರೆಂಚು ಪ್ರಧಾನಿ ಎಂ. ಗೈ ಮಾಲೆಟ್‌ರವರು ಅಲ್ಜೀರಿಯಾ ಕ್ರಾಂತಿಕಾರರಿಗೆ ಆಶ್ವಾಸನೆ ಕೊಟ್ಟಿರುವರು.

ಚಾಕುವಿನಿಂದ ಇರಿತ

ಹಾಸನ ಫೆ 26 — ಮೊನ್ನೆ ಹಾಸನದ ಜಿಲ್ಲೆಯ ಒಂಗೂರಿನಲ್ಲಿ ಬೋರೇಗೌಡ ಎಂಬವನು ಶಿವನಂಜೇಗೌಡರ ತೋಟದಲ್ಲಿ ಅಕ್ರಮವಾಗಿ ಪ್ರವೇಶಿಸಿ ತಂಗಿದಕಾಯಿಯನ್ನು ಕೆಡವಿದನೆಂದು ಊರಿನವರೆಲ್ಲರೂ ಸೇರಿ ವಿಚಾರಣೆ ಮಾಡುತ್ತಿರುವಾಗ ಸದರಿ ಬೋರೇಗೌಡನು ಒಕ್ಕಾಲಿಕೆ ಚಾಕುವಿನಿಂದ ಶಿವನಂಜೇಗೌಡರನ್ನು ಇರಿದು ಪರಾರಿ ಆಗುತ್ತಾನೆಂದು ವರದಿ ಆಗಿದೆ.

o o

ಸೂಚನೆಯೇನೂ ಬಂದಿಲ್ಲ

ಬೆಂಗಳೂರು 29 — ಶಿಕ್ಷಣಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಇಂದು ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ ಮೈಸೂರಿನಲ್ಲಿ ಬಳ್ಳಾರಿಯನ್ನು ಸೇರಿಸುವ ಬಗ್ಗೆ ಭಾರತ ಸರ್ಕಾರದಿಂದ ಯಾವ ಸೂಚನೆಯೂ ಬಂದಿಲ್ಲ ಎಂದರು.

ಪ್ರಚಾರ ವೈಖರಿ

ಹಾಸನ ಫೆ 26 — ಇಲ್ಲಿನ ಪೌರಸಭೆ ಚುನಾವಣೆ ಮಾರ್ಚ್ 3 ನೇ ತಾ|| ನಡೆಯುತ್ತಿದೆ ಕೆಲವು ಕಡೆ ಓಟರುಗಳಿಗೆ ಭಯೋತ್ಪಾದನೆ ಉಂಟಾಗುವ ರೀತಿ ಕೆಲವು ಉಮೇದುವಾರರಿಗೇನೆ ಬೆಂಬಲ ಕೊಡಬೇಕೆಂದು ಇತರರು ಬಂದು ಹೇಳುತ್ತಿರುತ್ತಾರೆ.

ಈಶ್ವರಲಾಲರಿಗೆ ದಂಡನೆ

ಸೂರತ್ ಫೆ 28 — ಗೋವಾದ ಮಿಲಿಟರಿ ಕೋರ್ಟು ಗುಜರಾತು ಪಿ. ಎಸ್. ಪಿ ಪ್ರಧಾನ ಕಾರ್ಯದರ್ಶಿ ಶ್ರೀ ಈಶ್ವರಲಾಲ ಸಿ ದೇಸಾಯರಿಗೆ ಹತ್ತು ವರ್ಷಗಳ ಸಶ್ರಮ ಸಜೆ ಮತ್ತು ಎರಡು ವರ್ಷಗಳ ವರಿಗೆ ದಿನಕ್ಕೆ ನಾಲ್ಕುವರೆ ರೂ ದಂಡ ವಿಧಿಸಿದೆ.

ಮಹಾಚುನಾವಣೆ

ರಂಗೂನ್ — ಮುಂದಿನ ಮಾಹೆ 27 ರಂದು ಬರ್ಮಾದಲ್ಲಿ ಮಹಾ ಚುನಾವಣೆಗಳು ನಡೆಯುವವು

ಐಕ್ ಮತ್ತೆ ಚುನಾವಣೆಗೆ

ವಾಷಿಂಗ್ಟ್ 29 — ಅಧ್ಯಕ್ಷ ಐಸೆಹೋವರು ಅಮೇರಿಕಾ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುವರು.

ಈಶರಲಾಲರಿಗೆ ಹತ್ತು ವರ್ಷ ಸಶ್ರಮ ಸಜೆ

ನವದೆಹಲಿ ಫೆ 28— ಕೇಂದ್ರ ಆಹಾರ ಹಾಗೂ ವ್ಯವಸಾಯ ಶಾಖೆಯ ಅರ್ಥಶಾಸ್ತ್ರ ಹಾಗೂ ಸಖ್ಯಾಸಂಗ್ರಹಣ ವಿಭಾಗದ ರೀತ್ಯಾ, 1955-56 ಸಾಲಿನಲ್ಲಿ 16.86 ಲಕ್ಷ ಟನ್ನುಗಳ ಬೆಳೆ ಸಕ್ಕರೆ ಉತ್ಪಾದನೆಯನ್ನು ಅಂದಾಜು ಮಾಡಲಾಗಿದೆ.

ನವದೆಹಲಿ ಫೆ 28— ಪಾಕಿಸ್ತಾನ ಸರಕಾರದವರು ಭಾರತ ಸಂಸ್ಥಾನಕ್ಕೆ 15000 ಟನ್ನುಗಳ ಪಶ್ಚಿಮ ಪಾಕಿಸ್ತಾನದ ಗೋಧಿಯನ್ನು ಸಾಲವಾಗಿ ಕೊಡುವರು

ನವದೆಹಲಿ ಫೆ 28— ಅಖಿಲ ಭಾರತದ ಅಂತ್ಯ ಅಂದಾಜಿನ ರೀತ್ಯಾ 1955-56 ರ ಸಾಲಿನಲ್ಲಿ 12585000 ಎಕರೆಗಳ ವಿಸ್ತೀರ್ಣದಲ್ಲಿ 3804000 ಟನ್ನುಗಳ ಕಡಲೆ ಕಾಯಿನ್ನು ಬೆಳೆಯಲಾಯಿತು

ಕೊಲಂಬೊ ಫೆ 28— ಸಿಲೋನಿನಲ್ಲಿ ಒಂದು ನೂರು ವರ್ಷಗಳ ಹಿಂದೆ ಸಾವಿರಗಟ್ಟಿ ಅನೆಗಳಿದ್ದವು— ಈಗ ಅದು ಒಂದು ಸಾವಿರಕ್ಕೆ ಕಮ್ಮಿ ಇಳಿದುಹೋಗಿದೆ — ಸಿಲೋನು ದ್ವೀಪದಲ್ಲಿ ಸಿಗುವ ಅನೆಯು ತಂಡವೇ ಬೇರೆ ಜಾತಿಯದು — ಈ ಜಾತಿಯನ್ನು ಉಳಿಸಲು ಅರಣ್ಯದ ಇಲಾಖೆಯವರು ತ್ವರಿತವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ.

ಲಾಹೋರು ಫೆ 28— ಬೆಲೂಚಿಸ್ತಾನದ ಪುಷ್ತೂ ಭಾಷೆ ಮಾತನಾಡುವ ಪ್ರದೇಶದಲ್ಲಿ ಒಂದು ಸಾವಿರ ಜನರು ರಾಜಕೀಯ ಕಾರಣಗಳಿಂದ ಬಂಧಿತರಾಗಿರುವರೆಂದೂ ಬೆಲೂಚಿಸ್ತಾನ ನಾಯಕ ಖಾನ್ ಅಬ್ದುಲ್ ಸಮದ್ ಖಾನ್ ತಿಳಿಸಿದ್ದಾರೆ.

ಶಿವಮೊಗ್ಗಾ ಫೆ 28— ಮಾರ್ಚ್ 16 ರಂದು ನಡೆಯುವ ಪುರಸಭಾ ಚುನಾವಣೆಗೆ 3 ಮಂದಿ ಸ್ತ್ರೀಯರೂ ಸೇರಿ 75 ಮಂದಿ ಸ್ಪರ್ಧಿಸಿದ್ದಾರೆ

ಇರ್ಷಾದ್ ಖಾರವರ ಆಗಮನ

ಇರಾನಿನ ದೊರೆ ಷಹನ್ಷಾರವರು ಈ ಮಧ್ಯಾಹ್ನ ಬೆಂಗಳೂರಿನಿಂದ ಮೈಸೂರಿಗೆ ರಾಣಿಯವರ ಸಮೇತ ಆಗಮಿಸಿದರು

ನಾಳೆಯ ಪಂಚಾಂಗ

ಆ|| ಮಹಾವಿದ್ವಾ|| ದೈವಜ್ಞಶಿಖಾಮಣಿ ಸಂಪಶ್ಯಕೃಷ್ಣಜೋಯಿಸರಿಂದ

2 ಶುಕ್ರವಾರ ಷಷ್ಠಿ ಸ್ವಾತಿ — ಎಶಾಪ

ಕೇಂದ್ರದ ಅಂದಾಜು

ನವದೆಹಲಿ ಫೆ 29— ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ದೇಶಮುಖರು ಇಂದು ಬಡ್ಜೆಟ್ ಮಂಡಿಸುತ್ತಾ, ಮುಂದಿನ ವರ್ಷದ ರೆವಿನ್ಯೂ ಬಾಬಿನಲ್ಲಿ 51.83 ಕೋಟಿ ರೂಗಳ ಖೋತಾವನ್ನೂ, ಒಟ್ಟಿನಲ್ಲಿ 390 ರೂಗಳ ಜೋತಾವನ್ನೂ ಪ್ರಕಟಿಸಿದರು — ಎಕ್ಸೈಜು ತೆರಿಗೆಯು ವರಮಾನ ಅಧಿಕಗೊಂಡಿದ್ದರಿಂದಲು ಮತ್ತು ರಕ್ಷಣಾಶಾಖೆಯ ವೆಚ್ಚದಲ್ಲಿನ ಉಳಿತಾಯದ ಕಾರಣದಿಂದಲೂ ಈ ಸಾಲಿನ ರೆವಿನ್ಯೂ ಖೋತಾ ಆದ 17.35 ಕೋಟಿ ರೂಪಾಯಿಗಳು 12.31 ಕೋಟಿ ರೂಗಳ ಹೆಚ್ಚುವರಿಯಾಗಿ ಪರಿವರ್ತಿತವಾಗುವ ನಿರೀಕ್ಷೆ ಇದೆ — ಈ ವರ್ಷದ ಒಟ್ಟು ಖೋತಾ 222 ಕೋಟಿ ರೂಪಾಯಿಗಳೆಂದು ನಿರೀಕ್ಷಿಸಲಾಗಿದೆ — ಮುಂದಿನ ವರ್ಷದ ಒಟ್ಟು ಖೋತಾ ಎಂದು ಅಂದಾಜು ಮಾಡಲ್ಪಟ್ಟಿರುವ 390 ಕೋಟಿ ರೂಪಾಯಿಗಳನ್ನು ಟ್ರೆಜರಿ ಬಿಲ್‌ಗಳ ವಿಸ್ತೀರ್ಣೆಯಿಂದ ಪೂರೈಸಲು ನಿರೀಕ್ಷಿಸಲಾಗಿದೆಯೆಂದು ಶ್ರೀ ದೇಶಮುಖ್ ಪ್ರಕಟಿಸಿದರು — ಮುಂದಿನ ಸಾಲಿನ ರಕ್ಷಣಾ ವೆಚ್ಚ 203.97 ಕೋಟಿ ರೂಪಾಯಿಗಳೆಂದು ಅಂದಾಜುಮಾಡಲಾಗಿದೆ — ಅನೇಕ ರೀತಿ ಹೊಸ ತೆರಿಗೆಗಳೂ ಇರುವ ತೆರಿಗೆಗಳು ಹೆಚ್ಚಿಸುವುದೂ ಆಗಿದೆ

ನೆಹರು ಅಮೇರಿಕಕ್ಕೆ

ನವ ದೆಹಲಿ — ಮುಂದೆ ಯಾವಾಗಲಾದರೂ ಅಮೇರಿಕಕ್ಕೆ ಭೇಟಿಕೊಡಲು ಅಧ್ಯಕ್ಷ ಐಸೆಹೋವರಂ ರಹಸ್ವಾನಕ್ಕೆ ಪಂ|| ನೆಹರು ಒಪ್ಪಿರುವರು.

ಚಿಕ್ಕ ಚಾರಿತ್ರಿಕ ನಾಟಕ—

ಜೇಬು ನಿನ್ನೇನಾ

(ಮುಂದುವರಿದುದು)

ದಿಲೀಪ್— ಅದು ಸಮರ್ಥನೀಯವೇ ಎಂದೆನ್ನವೆ ; ನಿಮ್ಮ ತಂದೆಯ ಮತದ ಹೆಸರಿನಲ್ಲಿ ಮಾಡಿದ ಮಾನವ ಹಿಂಸೆಯು ಸರಿಯಾದದ್ದು ಎನ್ನುವಿ.....

ಜೇಬು— ನಾನು ಹಾಗೆ ಹೇಳಲಿಲ್ಲ ದಿಲೀಪ್ ; ಧರ್ಮವನ್ನು ಅಪಾರ್ಥ ಮಾಡಿಕೊಂಡು, ಅಬ್ಬಾಜಾನ್ ಹಿಂದೂಗಳನ್ನು ಪೀಡಿಸುತ್ತಿರುವುದು ; ಅದಕ್ಕಾಗಿ ನನ್ನ ಹೃದಯವು ಕ್ಷೋಭಿಸುತ್ತಿದೆ.

ದಿಲೀ— (ವಿಕಟವಾಗಿ) ತುದಿನಾಲಿಗೆಯಿಂದ ಬರುತ್ತಿರುವ ಈ ಸುಭಾಷಿತಗಳು ಯಾರನ್ನು ತೋಷಮಾಡಬೇಕೆಂದು ?

ಜೇಬು— (ನಗುವಿನೊಡನೆ)— ನೀವು ನನ್ನನ್ನೂ, ನನ್ನ ನುಡಿಗಳನ್ನೂ ಈ ಬಗೆಯಲ್ಲಿ ಅಪಾರ್ಥಮಾಡಿಕೊಳ್ಳುವಿರೆಂದು ನನಗೆ ತಿಳಿದಿದೆ.

ದಿಲೀ— (ಬಹಳ ಉಗ್ರವಾಗಿ) ಅಪಾರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆ ?

ಜೇಬು— ಅವಶ್ಯಕತೆಯಿಲ್ಲ ; ಪರಿಸ್ಥಿತಿಗಳು ಹಾಗೆ ಮಾಡುತ್ತವೆ.

ದಿಲೀ— (ಸ್ವಲ್ಪ ಹೊತ್ತು ಆಲೋಚನೆ ಮಾಡುತ್ತಿರುವಂತೆ ಅಭಿನಯಿಸಿ) ಪರಿಸ್ಥಿತಿಗಳನ್ನು ಅನುಸರಿಸಿಕೊಂಡು ಹೋಗುವ ವ್ಯಕ್ತಿತ್ವವು ನನ್ನಲ್ಲಿಲ್ಲ : ನನ್ನಲ್ಲಿಯೇ ಅಲ್ಲ, ಯಾವ ರಾಜಪುತ್ರನಲ್ಲಿಯೂ ಇಲ್ಲ : ನಮ್ಮದು ವೀರಜಾತಿ : ನಿಮ್ಮಂಥಾ ಹೇಡಿಗಳಿಗೆ ಹೆದರಿ, ಮತವನ್ನೂ ಮನುಷ್ಯರನ್ನೂ ಕಂಡು ಭಯಗೊಂಡು ಹುಚ್ಚರಾಗುವವರು ನಮ್ಮಲ್ಲಿ ಒಬ್ಬರೂ ಇಲ್ಲವೆಂದು ತಿಳಿಯಬೇಕು.

ಜೇಬು— (ಹುಸುನಗುವಿನೊಂದಿಗೆ) ಚೆನ್ನಾಗಿ ಹೇಳಿದಿರಿ ; ನಿಂತುಕೊಂಡಿದ್ದುವಿರಲ್ಲಾ ; ಇಲ್ಲಿ, ಈ ಸೋಫಾದಲ್ಲಿ ....

ದಿಲೀ— ಮರ್ಯಾದೆ ಬೇಕಾಗಿಲ್ಲ ; ಕರೆಕಳುಹಿಸಿದ ಕಾರಣವು ಯಾವುದೋ ಜಾಗ್ರತೆಯಾಗಿ.....

ಜೇಬು— ಅದಕ್ಕೇನು ನಿಧಾನವಾಗಿ ಮಾತನಾಡಬಹುದು ; ಇಲ್ಲಿ ಕೂತುಕೊಂಡಿಲ್ಲಿ.....

ದಿಲೀ— (ವಿಕಟವಾಗಿ) ವಿಶ್ರಾಂತಿ ! ಏಕೆ ? ವಿಶ್ರಾಂತಿಯಾಗಿ ಪ್ರಾಣಗಳನ್ನು ತೆಗೆಯಲಿಕ್ಕೇ ಅಲ್ಲವೇ !

ಜೇಬು— (ಆಶ್ಚರ್ಯದೊಡನೆ) ಹೇ ಪರ್ವರ್ದಿಗಾರ್ ! ಏನು ದಿಲೀಪ್ ಆ ಮಾತುಗಳು ; ಅಬ್ಬಾಜಾನ್ ಜರ್ಜೆಗಳನ್ನು ಹಿಡಿದು ನೀವು ನನ್ನನ್ನು ಅಪಾರ್ಥ ಮಾಡಿಕೊಳ್ಳುತ್ತಿರುವಿ , ನನ್ನದು ಇಸ್ಲಾಂ ಮತವಾದರೂ, ನನಗೆ ಹಿಂದೂಗಳು ಪ್ರಿಯ ಸ್ನೇಹಿತರು ; ನೀವು ನನಗೆ ಪ್ರಾಣ.

ದಿಲೀ— (ಆಶ್ಚರ್ಯಚಕಿತನಾಗಿ) ಆ.....

[ಸಶೇಷ

ಎಲ್ಲಾ ವಿಧವಾದ
ಅಯುರ್ವೇದ ಔಷಧಿಗಳಿಗೂ
ಅಶೋಕ ಫಾರ್ಮಸಿ
ಕ್ಯಾನ್ಸಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ರಣಜಿತ್
ಈ ದಿನ ಸ
ಮು ಕ್ಕೂ ಸಾ ಲ್ (ಹಿಂದಿ)

ಶಕ್ತಿಸುಧಾ
— ಉತ್ತಮ ಟಾನಿಕ್ —

ನ್ಯೂ ಅಪೆರಾ
ಶಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲ್ಪಡುತ್ತಿದೆ
ಕೀರ್ತಿಯುತ 9 ನೇ ವಾರ ಆದರ್ಶ ಸತಿ
ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಪೂಲತಿ, ಮೋಹನ
ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

Protect the Cow ಗೋ ಸಂರಕ್ಷಣೆಮಾಡಿ
' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ
ಪ್ರೋತ್ಸಾಹಕರ ಚಂದಾ ಒಂದೇಸಾರಿ ರೂ 10 ; ಅವರಿಗೆ ಸದಾ ಪತ್ರಿಕೆ ಉಚಿತ
ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ
ನ್ನೊಳಗೊಂಡಿರುವ ಏಕೈಕ ಕನ್ನಡ ಪತ್ರಿಕೆ
ಈ ಕಾರ್ಯದಲ್ಲಿ ಸಹಾಯನೀಡುವ ಪೋಷಕರಿಗೂ, ಚಂದಾದಾರರಿಗೂ, ಲೇಖಕರಿಗೂ
ಜಾಹಿರಾತುದಾರರಿಗೂ, ಪ್ರಚಾರಕರಿಗೂ, ಏಜೆಂಟರಿಗೂ ವಂದನೆಗಳು
ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲಾಂಡ್ಸ್ ಚಿತ್ರಮಂದಿರದಲ್ಲಿ
2-3-56 ನೇ ಶುಕ್ರವಾರದಿಂದ ಆಮೋಘ ಪ್ರಾರಂಭ

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ವರ್ಣಲತಾ ಮೀನಾಕ್ಷಿ ಸುಂದರಂ ನೃತ್ಯಗಳು, ಕಣ್ಣಪ್ಪನಂದ ಸಂಗೀತ ಆಶ್ಚರ್ಯಕರ ಡೆಂಗುಬಡಿಸುವ ಸನ್ನಿವೇಶಗಳಿಂದ ಕುಂಬಿತುಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನ

Edited, Printed & Published by Dharma Prachara Niratha M. S. Krishna Rao, at the Satyavadi Press, Chamarajapuram, Mysore